ಮಾಡಬಹುದು; ಆದರೆ ನಾವು ಕಂಡುಹಿಡಿಯಬಹುದಾದ ಚಿಹ್ನೆಗಳೆಲ್ಲಕ್ಕಿಂತಲೂ ಉತ್ತಮವಾದುದೊಂದು ಇದೆ. ದೇವರ ಪೂಜೆಗೆಂದು ನೀವೊಂದು ವಿಗ್ರಹವನ್ನು ಕಂಡುಹಿಡಿಯಬಹುದು. ಆದರೆ ಅದಕ್ಕಿಂತ ಉತ್ತಮವಾದ ಸಂಕೇತವೆಂದರೆ ಜೀವಂತನಾಗಿರುವ ಮನುಷ್ಯನೇ."

ಇಲ್ಲಿ ನಾವು ಸ್ವಾಮೀಜಿಯವರ ಕರ್ಮಯೋಗಕ್ಕೆ ಪೀಠಿಕೆಯನ್ನು, ಅನುಷ್ಠಾನ ವೇದಾಂತವನ್ನು ನೋಡಬಹುದು. ಶ್ರೀರಾಮಕೃಷ್ಣರ **'ಶಿವಜ್ಞಾನೇ ಜೀವಸೇವಾ'** ಎಂಬ ಹೇಳಿಕೆಗೆ ಮತ್ತು ಸ್ವಾಮಿ ವಿವೇಕಾನಂದರ **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ಎಂಬ ಘೋಷಣೆಗೆ ಮೇಲಿನ ಉಪನಿಷತ್ತಿನ ವ್ಯಾಖ್ಯಾನವನ್ನೇ ಹಿನ್ನೆಲೆಯಾಗಿ ಪರಿಗಣಿಸಬಹುದು.

ನಮ್ಮ ನೈಜ ಸ್ವಭಾವದ ಜ್ಞಾನವನ್ನು ಹೊಂದಲು ಉಪನಿಷತ್ತುಗಳು ಅಧಿಕಾರಿ ತಾರತಮ್ಯದಿಂದ ಅನೇಕ ಉಪದೇಶಗಳನ್ನು ನೀಡಿವೆ ಎಂದು ಸ್ವಾಮೀಜಿ ಹೇಳುತ್ತಾರೆ. ದ್ವೈತ, ವಿಶಿಷ್ಟಾದ್ವೈತ, ಅದ್ವೈತ ಮತ್ತು ಇನ್ನಿತರ ಎಲ್ಲ ಸಂಪ್ರದಾಯಗಳ ಮತಗಳನ್ನೂ ಉಪನಿಷತ್ತುಗಳು ಪ್ರತಿಪಾದಿಸುತ್ತವೆ. ಹಿಂದೆ ಹೇಳಿದಂತೆ, ಮಾನವನನ್ನು ಹಂತಹಂತವಾಗಿ ಕೆಳಮಟ್ಟದಿಂದ ಪರಮಾತ್ಮನೆಡೆಗೆ ಅವು ಕರೆದೊಯ್ಯುತ್ತವೆ. ಬೇರೆ ಬೇರೆ ಸಿದ್ಧಾಂತಗಳು ಉಪನಿಷತ್ತಿನ ಸಹಾಯವನ್ನು ಪಡೆದು ತಮ್ಮದೇ ಆದ ಪರಿಭಾಷೆಯಲ್ಲಿ ಆತ್ಮ ಸಾಕ್ಷಾತ್ಕಾರದ ಅನೇಕ ಉಪಾಯಗಳನ್ನು ತಿಳಿಸುತ್ತವೆ. ಕೆಲವು ವ್ರತ ಪೂಜೆಗಳನ್ನು ಮಾಡಿದರೆ ನಾವು ನಮ್ಮ ಸ್ವರಾಜ್ಯವನ್ನು ಪಡೆಯಬಹುದೆಂದು ಕೆಲವು ಹೇಳಿದರೆ, ಕೆಲವು ವಿಶಿಷ್ಟ ರೀತಿಯ ಜೀವನ ನಡೆಸಿದರೆ ಅದನ್ನು ಪಡೆಯಬಹುದೆಂದೂ, ಇನ್ನು ಕೆಲವು ಇಂತಿಷ್ಟು ಸಂಪತ್ತನ್ನು ದೇವತೆಗೆ ಕೊಡುಗೆ ನೀಡಿದರೆ ಪಡೆಯಬಹುದೆಂದೂ, ಮತ್ತೆ ಕೆಲವು ಇಂತಹ ಆಹಾರವನ್ನು ತಿಂದರೆ ಪಡೆಯಬಹುದೆಂದೂ ಹೇಳುತ್ತವೆ. ಸೃಷ್ಟಿಕರ್ತನಾದ ಭಗವಂತನೆದುರು ಸಾಷ್ಟಾಂಗ ನಮಸ್ಕಾರ ಮಾಡಿ ಕಣ್ಣೀರ್ಗರೆದು ಪ್ರಾರ್ಥಿಸಿದರೆ ನಮ್ಮ ಕಳೆದುಹೋದ ರಾಜ್ಯ ಸಿಕ್ಕುವುದೆಂದು ಕೆಲವು ಹೇಳಿದರೆ, ಆ ಭಗವಂತನನ್ನು ಉತ್ಕಟತೆಯಿಂದ ಪ್ರೀತಿಸಿದರೆ ಸಾಕೆಂದು ಇನ್ನೊಂದೆಡೆ ಹೇಳುತ್ತವೆ. ಆದರೆ, ಉಪನಿಷತ್ತುಗಳ ಕಡೆಯ ಹಾಗೂ ಮಹತ್ತರವಾದ ಉಪದೇಶವೆಂದರೆ, "ನಾವು ಯಾರ ಮುಂದೆಯೂ ರೋದಿಸುತ್ತ ಕೈಜೋಡಿಸಿ ನಿಲ್ಲಬೇಕಾಗಿಲ್ಲ! ಯಾವ ಪೂಜೆ–ವ್ರತಗಳನ್ನೂ ಆಚರಿಸಬೇಕಾಗಿಲ್ಲ! ಸ್ವರಾಜ್ಯವನ್ನು ಹೇಗೆ ಸಂಪಾದಿಸಿಕೊಳ್ಳಬೇಕು ಎಂದೂ ಆಲೋಚಿಸಬೇಕಿಲ್ಲ! ಏಕೆಂದರೆ, ಅದನ್ನು ನಾವೆಂದೂ ಕಳೆದುಕೊಂಡೇ ಇಲ್ಲ! ಯಾವುದನ್ನು ಕಳೆದುಕೊಂಡಿಲ್ಲವೊ, ಅದನ್ನು ಏಕೆ ಹುಡುಕಬೇಕು?" ಎಂಬ ಧೀರ ಬೋಧನೆ. ಉಪನಿಷತ್ತುಗಳು ಮುಕ್ತಿಯ ಬಗ್ಗೆ ಮಾತನಾಡುವುದೇ ಇಲ್ಲ, ಅವು ಕೇವಲ ನಮ್ಮ ನೈಜ ಸ್ವಾತಂತ್ರ್ಯವನ್ನೇ ಪ್ರತಿಪಾದಿಸುವುವು ಎನ್ನುತ್ತಾರೆ ಸ್ವಾಮೀಜಿ.

ಸ್ವಾಮೀಜಿಯವರ ಪ್ರಕಾರ ಯಾವುದು ನಮ್ಮನ್ನು ದೈಹಿಕವಾಗಿ, ಬೌದ್ಧಿಕವಾಗಿ, ಆಧ್ಯಾತ್ಮಿಕವಾಗಿ ದುರ್ಬಲರನ್ನಾಗಿ ಮಾಡುವುದೊ ಅದನ್ನು ವಿಷದಂತೆ ತ್ಯಜಿಸಬೇಕು. ನಮ್ಮನ್ನು ಪುರುಷಸಿಂಹರನ್ನಾಗಿ ಮಾಡುವ ಸಿದ್ಧಾಂತ ಬೇಕು. ಯಾವುದು ರಹಸ್ಯವಿದ್ಯೆಯೋ (esoteric) ಅದು ನಮ್ಮನ್ನು ದುರ್ಬಲರನ್ನಾಗಿ ಮಾಡುವುದು. ಆದ್ದರಿಂದ ಸ್ವಾಮೀಜಿ, ಉಪನಿಷತ್ತುಗಳೆಡೆ ಹಿಂತಿರುಗಿ ಹೋಗಲು ನಮಗೆ ಕರೆನೀಡುತ್ತಾರೆ. ಪ್ರಕಾಶಮಾನವಾದ, ಶಕ್ತಿಯನ್ನು ನೀಡುವ ಶಾಸ್ತ್ರಗಳು ಅವು. ಅವನ್ನು ಸ್ವೀಕರಿಸಿ ಭರತಖಂಡದ ಉದ್ಧಾರ ಮಾಡಬೇಕೆಂದು ಹೇಳುತ್ತಾರೆ. **ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ ಆ ಯೇ ಧಾಮಾನಿ ದಿವ್ಯಾನಿ ತಸ್ಥುಃ । ವೇದಾಹಮೇತಂ ಪುರುಷಂ ಮಹಾಂತಮ್ ಆದಿತ್ಯವರ್ಣಂ ತಮಸಃ ಪರಸ್ತಾತ್ ॥ ತಮೇವ ವಿದಿತ್ವಾ ಅತಿಮೃತ್ಯುಮೇತಿ ನಾನ್ಯಃ ಪಂಥಾಃ ವಿದ್ಯತೇಽಯನಾಯ।** *(ಶ್ವೇತಾಶ್ವತರ ಉಪನಿಷತ್ ೨.೫, ೩.೮).*

"ಹೇ ಅಮೃತಪುತ್ರರೇ! ಹೇ ಸ್ವರ್ಗಲೋಕದಲ್ಲಿರುವ ದೇವತೆಗಳೇ! ಕೇಳಿರಿ. ಕತ್ತಲಿನಿಂದಾಚೆಯಿರುವ ಸೂರ್ಯನಂತೆ ಹೊಳೆಯುತ್ತಿರುವ ಆ ಪರಮಾತ್ಮನನ್ನು ನಾನು ಅರಿತುಕೊಂಡಿದ್ದೇನೆ. ಅವನನ್ನು ಅರಿತುಕೊಂಡರೆ ಮಾತ್ರ ನೀವು ಮೃತ್ಯುವಿನಿಂದ ಪಾರಾಗಬಲ್ಲಿರಿ. ಬೇರಾವ ಮಾರ್ಗವೂ ಇಲ್ಲ" – ಈ ಋಷಿಯಂತೆ ಸ್ವಾಮೀಜಿ ಮನುಕುಲದ ಮೇಲಿನ ಅತ್ಯಂತ ಪ್ರೀತಿಯಿಂದ ನಮಗೆ ಎಲ್ಲ ಉಪನಿಷತ್ತುಗಳ ಸಾರವನ್ನು ತಮ್ಮ ಉಪದೇಶಗಳ ಮೂಲಕ ನೀಡಿದ್ದಾರೆ. ಅದು ಸಾಮಾಜಿಕ ಬಣ್ಣವನ್ನೇ ಪಡೆದಿರಲಿ, ರಾಜಕೀಯ ಬಣ್ಣವನ್ನೇ ಪಡೆದಿರಲಿ, ಅವೆಲ್ಲದರ ಹಿನ್ನೆಲೆಯಲ್ಲಿ ಇರಬೇಕಾದ್ದು ಆಧ್ಯಾತ್ಮಿಕತೆ ಮಾತ್ರ.

## ನೊಂದ ಮನಸ್ಸಿಗೆ ತಂಪೆರೆದರು

**ಸ್ವಾಮಿ ವಿವೇಕಾನಂದರು ಒಬ್ಬ ಪ್ರಭಾವಿ ವ್ಯಕ್ತಿ; ಮಹಾನ್ ಸಂನ್ಯಾಸಿ. ಅವರ ಜೀವನಚರಿತ್ರೆ ಮತ್ತು ಪ್ರವಚನಗಳನ್ನು ಓದಿ ಅನೇಕ ಜನರು ಸ್ಫೂರ್ತಿಪಡೆದಿದ್ದಾರೆ. ಅವರುಗಳಲ್ಲಿ ನಾನು ಸಹ ಒಬ್ಬಳು. ನನಗೆ ಮೊದಲಿನಿಂದಲೂ ವಿವೇಕಾನಂದರ ಜೀವನ ಮತ್ತು ಬೋಧನೆಗಳಲ್ಲಿ ತುಂಬಾ ಆಸಕ್ತಿ. ಅವನ್ನು ಜೀವನದಲ್ಲಿ ಅಲ್ಪ ಸ್ವಲ್ಪ ಅಳವಡಿಸಿಕೊಳ್ಳಲು ಪ್ರಯತ್ನಿಸಿದ್ದೇನೆ.**

**ಈ ಮಧ್ಯೆ ನಾನು ಮಾನಸಿಕ ತೊಂದರೆಗೆ ಒಳಗಾದೆ. ಆದುದರಿಂದ ಕೆಲಸದಲ್ಲಿ ಸ್ಫೂರ್ತಿ ಪಡೆಯಲು 'ವಿವೇಕಪ್ರಭ' ಪತ್ರಿಕೆ ಮತ್ತು ವಿವೇಕಾನಂದರ ಜೀವನ ಮತ್ತು ಸಂದೇಶಗಳ ಮೊರೆಹೋದೆ. ಇದರಿಂದ ಈಗ ನಾನು ದಿನನಿತ್ಯದ ಚಟುವಟಿಕೆಗಳನ್ನು ಸರಾಗವಾಗಿ ಮಾಡುವಂತಾಗಿದೆ; ಜೀವನದ ಆಗುಹೋಗುಗಳನ್ನು ಧೈರ್ಯವಾಗಿ ಎದುರಿಸುವ ಶಕ್ತಿ ಮನಸ್ಸಿಗೆ ಬಂದಿದೆ; ಸಾಧ್ಯವಾದ ಮಟ್ಟಿಗೆ ಆಧ್ಯಾತ್ಮಿಕ ಜೀವನವನ್ನು ನಡೆಸುವಂತಾಗಿದೆ; ಕೈಲಾದ ಮಟ್ಟಿಗೆ ಬೇರೆಯವರಿಗೆ ಸಹಾಯ ಮಾಡುವಂತಾಗಿದೆ; ದೇವರನ್ನು ನಂಬಿ ಮುಂದಡಿ ಇಡುವ ಧೈರ್ಯ ಬಂದಿದೆ. ಸ್ವಾಮಿ ವಿವೇಕಾನಂದರ ಪ್ರವಚನಗಳನ್ನು ಓದಿದರೆ ನನ್ನ ಮನಸ್ಸಿಗೆ ತಂಪೆರೆದಂತೆ ಆಗುತ್ತದೆ. ಇದರಿಂದ ರಾಮಕೃಷ್ಣ ಪರಮಹಂಸರು ಮತ್ತು ಶಾರದಾದೇವಿಯವರು ದೈವೀ ವ್ಯಕ್ತಿಗಳೆಂದು ಪೂಜಿಸುವ ಭಾವನೆ ನನಗೆ ಬಂದಿದೆ. ಒಟ್ಟಿನಲ್ಲಿ ಹೇಳುವುದಾದರೆ ಸ್ವಾಮಿ ವಿವೇಕಾನಂದರ ಜೀವನಚರಿತ್ರೆ ಮತ್ತು ಪ್ರವಚನಗಳೇ ನನಗೆ ದಾರಿದೀಪವಾಗಿವೆ; 'ವಿವೇಕಪ್ರಭ' ಪತ್ರಿಕೆ ಸಹ ನನಗೆ ಸ್ಫೂರ್ತಿದಾಯಕವಾಗಿದೆ. ನನ್ನಂತೆ ನೊಂದಮನಸ್ಸಿನವರು ಸ್ವಾಮಿ ವಿವೇಕಾನಂದರ ಜೀವನ ಮತ್ತು ಸಂದೇಶಗಳಿಂದ ಉಪಯೋಗ ಮತ್ತು ಸ್ಫೂರ್ತಿ ಪಡೆಯಲಿ ಎಂದು ಆಶಿಸುತ್ತೇನೆ.**

**– ತ್ರಿಪುರ ವಿಜಯ ಕೆ.ಎಮ್., ಉಡಿಗಾಲ, ಚಾಮರಾಜನಗರ ತಾಲ್ಲೂಕು**

# MAHAJANA EDUCATION SOCIETY

Jayalakshmipuram, Mysore – 570 012

**INSTITUTIONS RUN BY THE SOCIETY:**

Mahajana Primary School * Mahajana Public School(CBSE) * Mahajana High School * SBRR Mahajana Pre-University College * Ranga Rao Memorial PU College / JOC * SBRR Mahajana First Grade College(Accredited by NAAC with 4* Grade): B A, B Com, B Sc., B B M., B H M * SBRR Mahajana Law College- 3 years & 5 years Course in LL B * **Post Graduate Centre** – Masters Degree in Computer Application(MCA), MBA(Affiliated to Mysore University), MBA I Tech, M Com., M Sc Bio-technology, MSW & M Sc (Microbiology), M Sc(Comp.Sc.), M T A(Tourism), E-Governance, M Sc(IT), B Sc (IT), M Sc Biotechnology & M Sc Microbiology(Affiliated to KSOU) (Distance Education Mode), P G Diploma in HRM (Evening Programme) * Mahajana D Ed College * Mahajana Ladies Hostel * Institutions are all provided with Computer section and well equipped laboratories like Electronics, Psychology, etc. equipped laboratories like Electronics, Psychology, etc. * Has well equipped Libraries from Primary to Degree level and Post Graduate Courses. Technically qualified librarians are looking after the Libraries. * Education Society has Health Club, Stadium and Pavilion of its own for conducting of all outdoor games and also indoor games like Shuttle, Table Tennis, Chess, etc. * Two Guest rooms. * Auditorium facilities are available in all the Institutions and very well equipped Halls – Vivekananda Hall / Praveen Memorial Hall / Seminar Hall / Audio Visual Centres.

*With Best Compliments from:*



# Sree Renuka Associates

**General Merchants & Commission Agents,**
**Old Hospital Road,**
**Davangere-577 001, Karnataka**
**Ph.(O) 08192-272381, Fax:231336 Mob:94484-61634**

# ಪರಿವ್ರಾಜಕರಾಗಿ ಸ್ವಾಮಿ ವಿವೇಕಾನಂದರು

**ಸ್ವಾಮಿ ವಿವೇಕಾನಂದರ ಜೀವನದಲ್ಲಿ ಅವರು ಭಾರತಾದ್ಯಂತ ಮಾಡಿದ ಪರಿವ್ರಾಜಕ ಪರ್ಯಟನವು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಅಜ್ಞಾತರಾಗಿ ಭಾರತದ ಉದ್ದಗಲಗಳಲ್ಲಿ ಅವರು ಮಾಡಿದ ಪ್ರವಾಸವು, ತಮ್ಮ ಜೀವನದ ಧ್ಯೇಯೋದ್ದೇಶಗಳನ್ನು ರೂಪಿಸಿಕೊಳ್ಳಲು ಅವರಿಗೆ ಸಹಾಯ ಮಾಡಿತು. ಈ ಪ್ರವಾಸದ ಅನುಭವಗಳನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಟ್ಟಿರುವ ಸ್ವಾಮೀಜಿಯವರು ಮಂಗಳೂರಿನ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.**



ಶ್ರೀರಾಮಕೃಷ್ಣ ಪರಮಹಂಸರ ಮಹಾಸಮಾಧಿಯ ನಂತರ ಅವರ ನೇರ ಶಿಷ್ಯರು ನಿರಂತರ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದರು. ಅವರ ಸಂಪೂರ್ಣ ವ್ಯಕ್ತಿತ್ವವೆಲ್ಲಾ ಭಗವಂತನಲ್ಲಿ ತಲ್ಲೀನವಾಗಿಬಿಟ್ಟಿತ್ತು. ಆ ಯುವ ಸಂನ್ಯಾಸಿಗಳೆಲ್ಲಾ ಪರಿಪೂರ್ಣ ಆಧ್ಯಾತ್ಮಿಕ ಜೀವನವನ್ನು ನಡೆಸುತ್ತ, ತಮ್ಮ ಗುರುದೇವನ ವ್ಯಕ್ತಿತ್ವದ ಒಂದು ಅಂಶವನ್ನು ಪ್ರತಿನಿಧಿಸುವಂತೆ ಇದ್ದರು. ಈ ಸಂನ್ಯಾಸಿ ಶಿಷ್ಯರ ಮೂಲಕ ರಾಮಕೃಷ್ಣ ಸಂಘವು ಹುಟ್ಟಿಕೊಂಡಿತು. ಈ ಸಂನ್ಯಾಸಿಗಳು ಎರಡು ಮನೋಭಾವಗಳನ್ನು ಹೊಂದಿದ್ದರು.

**ಮೊದಲನೆಯದು :** ಸಂನ್ಯಾಸಿಗಳೆಲ್ಲಾ ಮಠದಲ್ಲಿ ಒಂದೇ ಕಡೆ ಒಮ್ಮತದಿಂದ ಇದ್ದುಕೊಂಡು, ಶ್ರೀರಾಮಕೃಷ್ಣರ ಸಂದೇಶಗಳನ್ನು ಪ್ರಸಾರ ಮಾಡುವುದು; **ಎರಡನೆಯದು :** ಸಂನ್ಯಾಸಿಗಳಿಗೆ ಸಹಜವಾದ ಸ್ವತಂತ್ರ ಮನೋಭಾವದಿಂದ ಪರಿವ್ರಾಜಕರಾಗಿ ತೀರ್ಥಾಟನೆ ಮಾಡುವುದು. ಈ ಎರಡೂ ಅಂಶಗಳು ಪ್ರತಿಯೊಬ್ಬ ಶಿಷ್ಯರಲ್ಲೂ ಇದ್ದವೆನ್ನಬಹುದು. ಆ ಸಂನ್ಯಾಸಿ ಶಿಷ್ಯರಲ್ಲಿ ಪ್ರಮುಖರಾದ ಸ್ವಾಮಿ ವಿವೇಕಾನಂದರಲ್ಲಂತೂ ಈ ಎರಡೂ ಮನೋಭಾವಗಳು ತುಂಬ ಪ್ರಬಲವಾಗಿ ಕೆಲಸ ಮಾಡುತ್ತಿದ್ದವು.

**ಧ್ಯೇಯ:** ಭಾರತ ದೇಶವನ್ನು ಮೇಲೆತ್ತಬೇಕೆಂಬ, ಸನಾತನ ಧರ್ಮವನ್ನು ಪುನರುಜ್ಜೀವನಗೊಳಿಸಬೇಕೆಂಬ ಮತ್ತು ದೇಶದ ಜನತೆಯನ್ನು ಜಾಗೃತಗೊಳಿಸಬೇಕೆಂಬ ಅತ್ಯುನ್ನತವಾದ ಧ್ಯೇಯ ದಿಂದಲೇ, ಪರಿವ್ರಾಜಕರಾಗಿ ಹೊರಡಬೇಕೆಂಬ ಬಯಕೆ ಸ್ವಾಮಿ ವಿವೇಕಾನಂದರಲ್ಲಿ ಹುಟ್ಟಿಕೊಂಡಿತು.

**ಪರಿವ್ರಾಜಕರಾಗಿ ತೀರ್ಥಾಟನೆ:** ದೇಶ ಸಂಚಾರ ಮಾಡುವುದು ಸಂನ್ಯಾಸಿಗಳಲ್ಲಿ ಬೆಳೆದುಬಂದಿರುವ ಸಂಪ್ರದಾಯ. ಆದ್ದರಿಂದ ಈ ಯುವಸಂನ್ಯಾಸಿಗಳಿಗೆ ಸಹಜವಾದ ಪರಿವ್ರಾಜಕ ಮನೋಭಾವವು, ಮಠ ತ್ಯಜಿಸಿ ದೂರ ಹೋಗುವಂತೆ, ಏಕಾಂತದಲ್ಲಿದ್ದುಕೊಂಡು ಸಾಧನೆ ಮಾಡುವಂತೆ ಪ್ರೇರೇಪಿಸುತ್ತಿತ್ತು. ಪರಿವ್ರಾಜಕರಾಗಿ ತೀರ್ಥಾಟನೆ ಮಾಡುವಾಗ ಮಠದ ಅಸ್ತಿತ್ವಕ್ಕೆ ಯಾವುದೇ ರೀತಿಯಾಗಿ ಧಕ್ಕೆಯಾಗದಂತೆ, ಯಾವಾಗಲೂ ಸಂನ್ಯಾಸಿಗಳ ಒಂದು ಗುಂಪು ಮಠದಲ್ಲಿ ಇರುತ್ತಿತ್ತು. ಮೊದಲ ನಾಲ್ಕು ವರ್ಷಗಳ ಕಾಲ ವಿವೇಕಾನಂದರು ಸಣ್ಣ ಪುಟ್ಟ ತೀರ್ಥಯಾತ್ರೆಗಳಿಗೆ ಹೋಗಿ ಬರುತ್ತಿದ್ದರು. ನಂತರ ಸುಮಾರು ಏಳು ವರ್ಷಗಳ ದೀರ್ಘಕಾಲ ಅವರು ಮಠಕ್ಕೆ ಹಿಂದಿರುಗದೇ ನಿರಂತರ ಪರಿವ್ರಾಜಕರಾಗಿಯೇ ಇದ್ದರು.

ಪರಿವ್ರಾಜಕರು ಯಾರು? ಹಿಂದೂ ಧರ್ಮದಲ್ಲಿ ಸಂನ್ಯಾಸಿಗಳಿಗೆ ತೀರ್ಥಾಟನೆಯಲ್ಲಿ ತುಂಬ ಪ್ರೇಮ. ಹಿಂದಿಯಲ್ಲಿ ಒಂದು ಮಾತುಂಟು. **'ಬಹ್‌ತಾ ಪಾನಿ, ಚಲತಾ ಸಾಧು'** ಅಂದರೆ ನೀರು ಯಾವಾಗಲೂ ಹರಿಯುತ್ತಿರಬೇಕು, ಸಂನ್ಯಾಸಿ ಯಾವಾಗಲೂ ಸಂಚರಿಸುತ್ತಿರಬೇಕು' ಎಂದು. ಹೀಗಿದ್ದರೆ ನೀರು ನಾರುವುದಿಲ್ಲ. ಸಂನ್ಯಾಸಿಯೂ ಕೆಡುವುದಿಲ್ಲ. ನೀರು ಒಂದು ಕಡೆ ನಿಂತರೆ ಪಾಚಿಕಟ್ಟಿ, ಕೊಳೆತು ನಾರುತ್ತದೆ. ಹಾಗೆಯೇ ಸಂನ್ಯಾಸಿಗಳು ಒಂದೇ ಕಡೆ ಹಲವಾರು ವರ್ಷ ಇರುವುದರಿಂದ ಅವರಿಗೆ ಆ ಸ್ಥಳದ ಮೇಲೆ, ಆ ಸ್ಥಳದಲ್ಲಿ ನೆಲೆಸಿರುವ ವ್ಯಕ್ತಿಗಳ ಮೇಲೆ ಆಸಕ್ತಿ ಮಮಕಾರಗಳು ಹುಟ್ಟಬಹುದು. ಸಂನ್ಯಾಸಿಗಳೆಂದರೆ ಸರ್ವಸಂಗ ಪರಿತ್ಯಾಗ ಮಾಡಿದವರು. ಆಧ್ಯಾತ್ಮಿಕ ಜೀವನದಲ್ಲಿ ಸಂಗತ್ಯಾಗ ಮಾಡಿದರೆ ಮಾತ್ರ ಪ್ರಗತಿ. ಈ ಕಾರಣದಿಂದಲೇ ಅವರು ಒಂದು ಸ್ಥಳದಲ್ಲಿ ನಿಲ್ಲದೆ ಸದಾ ಸಂಚಾರ ಮಾಡುತ್ತಿರಬೇಕು. ಆದ್ದರಿಂದ ಅಂತಹವರನ್ನು 'ಪರಿವ್ರಾಜಕರು' ಎಂದು ಕರೆಯುತ್ತಾರೆ.

ಯಾವ ಕ್ಷೇತ್ರಗಳಲ್ಲಿ ಭಗವಂತ ವಿಶೇಷವಾಗಿ ಆರಾಧಿಸಲ್ಪಡುತ್ತಿದ್ದಾನೆಯೋ, ಯಾವ ಕ್ಷೇತ್ರಗಳು ಅನೇಕ ಸಾಧು–ಸಂತರ ಸಮಾಗಮದಿಂದ ಮತ್ತಷ್ಟು ಪುನೀತವಾಗಿವೆಯೋ ಅದೇ ತೀರ್ಥ. ಇಂತಹ ತೀರ್ಥಗಳಿಗೆ ಹೋಗಲು ಪ್ರತಿಯೊಬ್ಬರಿಗೂ ಇಚ್ಛೆಯಾಗುತ್ತದೆ. ಸರ್ವಸಂಗ ಪರಿತ್ಯಾಗ ಮಾಡಿರುವ ವಿವೇಕಾನಂದರಿಗೂ ಇಂತಹ ಇಚ್ಛೆ ಉಂಟಾಯಿತು.

**ಉದ್ದೇಶ :** ಸ್ವಾಮೀಜಿಯವರು ಭಾರತದ ಸಾಮಾಜಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಹಿನ್ನೆಲೆಯನ್ನು ಹಾಗೂ ಅದರ ಪ್ರಸ್ತುತ ಪರಿಸ್ಥಿತಿಗಳನ್ನು ಕಣ್ಣಾರೆ ಕಂಡು ಅರಿತುಕೊಳ್ಳಬೇಕಾದ ಆವಶ್ಯಕತೆಯಿತ್ತು; ಹಾಗೆಯೇ ಸಾವಿರಾರು ಜನರ ಸ್ನೇಹ–ಪ್ರೇಮ ಭಕ್ತಿಗಳನ್ನು ಗೆದ್ದು, ಅವರಿಂದ ಧರ್ಮಪ್ರಚಾರ ಕಾರ್ಯ ಮಾಡಿಸಬೇಕಾದ ಮತ್ತು ಗುಲಾಮಗಿರಿಯಲ್ಲಿ ಮುಳುಗಿಹೋಗಿದ್ದ ಭಾರತವನ್ನು ಮೇಲೆತ್ತಬೇಕಾದ ಮಹಾ ಕಾರ್ಯವಿತ್ತು. ಆದ್ದರಿಂದ ಈ ಎಲ್ಲಾ ಉದ್ದೇಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸ್ವಾಮೀಜಿಯವರು ಸಂಚಾರ ಮಾಡಿದರು.

**ಧೋರಣೆ :** ತೀರ್ಥಯಾತ್ರೆಗಾಗಿ ಹೊರಟುನಿಂತ ಸಂನ್ಯಾಸಿಗಳ ಬಗ್ಗೆ ಸ್ವಾಮೀಜಿಯ ಧೋರಣೆಯೇನೆಂದರೆ, "ಅವರು ತಮ್ಮ ತಮ್ಮ ಅನುಭವಗಳನ್ನು ತಾವೇ ಗಳಿಸಿಕೊಳ್ಳಲಿ. ಸ್ವತಂತ್ರರಾಗಿದ್ದು, ತಮ್ಮ ಸತ್ವ ಪರೀಕ್ಷೆ ಮಾಡಿಕೊಳ್ಳಲಿ. ಈ ಹೊಸ ಜೀವನಾನುಭವಗಳು ಅವರನ್ನು ಧೀರರನ್ನಾಗಿ ಅಜೇಯರನ್ನಾಗಿ ಮಾಡುತ್ತವೆ. ಹೀಗೆ ಅವರು ಪುರುಷಸಿಂಹರಾಗುತ್ತಾರೆ" ಎಂಬುದಾಗಿತ್ತು. ಆದ್ದರಿಂದ ಪರಿವ್ರಾಜಕ ಜೀವನ ಕೈಗೊಳ್ಳುವಂತೆ ಮಠದ ಸಂನ್ಯಾಸಿಗಳನ್ನು ಸ್ವಾಮೀಜಿ ಪ್ರೋತ್ಸಾಹಿಸುತ್ತಿದ್ದರು.

**ಪರಿವ್ರಾಜಕ ಜೀವನ ಪ್ರಾರಂಭ :** ಸ್ವಾಮೀಜಿಯ ಮನಸ್ಸು ಮಠದಿಂದ ಹೊರಟು ಪರಿವ್ರಾಜಕರಾಗಿ ದೀರ್ಘಕಾಲ ಸುತ್ತಾಡಬೇಕೆಂದು ತುಂಬ ಕಾತರಗೊಂಡಿತು. ಹಾಗೆ ೧೮೮೭ ಫೆಬ್ರವರಿ ಅಂತ್ಯಭಾಗದಲ್ಲಿ ಹೊರಟಿದ್ದರೂ, ನಾನಾ ಕಾರಣಗಳಿಂದಾಗಿ ಹಿಂದಿರುಗಿ ಬಂದುಬಿಡಬೇಕಾಯಿತು. ಮತ್ತೆ ೧೮೯೦ರಲ್ಲಿ ಬಾರಾನಗರ ಮಠವನ್ನು ಬಿಟ್ಟು ಹೊರಟರು. ಸಮಸ್ತ ಭಾರತದ ಸಂಚಾರವನ್ನೂ ಪಶ್ಚಿಮ ದೇಶಗಳ ಜೈತ್ರ ಯಾತ್ರೆಯನ್ನೂ ಮುಗಿಸಿಕೊಂಡು ಹಿಂದಿರುಗುವವರೆಗೆ, ಮಠದಿಂದ ದೂರವೇ ಇದ್ದರು.

**ಅದ್ಭುತ ವ್ಯಕ್ತಿತ್ವ :** ಪರಿವ್ರಾಜಕ ವಿವೇಕಾನಂದರದು ಎಲ್ಲರ ಮನಸ್ಸುಗಳನ್ನು ಸೆಳೆಯುವಂತಹ ವ್ಯಕ್ತಿತ್ವ. ಒಬ್ಬ ಸಾಮಾನ್ಯ ಸಂನ್ಯಾಸಿಯಂತೆ ಕಾವಿಬಟ್ಟೆ ತೊಟ್ಟಿದ್ದರೂ, ಅವರಲ್ಲಿ ರಾಜತೇಜಸ್ಸು, ರಾಜಗಾಂಭೀರ್ಯ ಎದ್ದುಕಾಣುತ್ತಿತ್ತು. ಅವರ ಸದೃಢವಾದ ಎತ್ತರದ ಮೈಕಟ್ಟು, ದಷ್ಟಪುಷ್ಟವಾದ ಅಂಗಾಂಗಗಳು, ತೇಜಪುಂಜವಾದ ಕಣ್ಣುಗಳು, ಮನೋದಾರ್ಢ್ಯವನ್ನು ಪ್ರತಿಬಿಂಬಿಸುವ ಮುಖಲಕ್ಷಣ, ಪ್ರಭಾವಶಾಲಿಯಾದ, ಮಹಿಮೆಯನ್ನು ಸಾರಿ ಹೇಳುವ ಒಟ್ಟು ವ್ಯಕ್ತಿತ್ವ – ಇವುಗಳು ಅವರು ಹೋದಲ್ಲೆಲ್ಲ ಜನ ಅವರನ್ನೇ ದಿಟ್ಟಿಸಿ ನೋಡುವಂತೆ ಮಾಡುತ್ತಿದ್ದವು. ನೋಡಿದ ಕೂಡಲೇ ಗೌರವ ಭಕ್ತಿಗಳ ಭಾವವನ್ನೆಬ್ಬಿಸುವ ವ್ಯಕ್ತಿತ್ವ ಅವರದ್ದು. ಭಗವದ್ಗೀತೆ ಮತ್ತು The imitation of Christ (ಕ್ರಿಸ್ತನ ಅನುಸರಣೆ) ಎಂಬ ಎರಡು ಪುಸ್ತಕಗಳನ್ನು ಹಿಡಿದುಕೊಂಡು. ಶಾಂತವಾಗಿ, ಗಂಭೀರ ಭಾವದಿಂದ ಮತ್ತು ಹೃದಯದಲ್ಲಿ ಪರಮ ಉಲ್ಲಾಸಗಳಿಂದ ಪರಿವ್ರಾಜಕರಾಗಿ ಸಾಗುತ್ತಿದ್ದರು, ಸ್ವಾಮೀಜಿ.

**ಸಾಮಾನ್ಯ ಸಂನ್ಯಾಸಿಯಂತೆ :** ಪರಿವ್ರಾಜಕರಾಗಿದ್ದ ಆ ದಿನಗಳಲ್ಲಿ ಸ್ವಾಮೀಜಿ ತಮ್ಮ ಅಪಾರವಾದ ವಿದ್ಯೆಯನ್ನೂ ಸಾಮರ್ಥ್ಯವನ್ನೂ ಅಡಗಿಸಿಕೊಂಡು, ಒಬ್ಬ ತೀರ ಸಾಮಾನ್ಯ ಸಂನ್ಯಾಸಿಯಂತೆ ಸುತ್ತಾಡುತ್ತಿದ್ದರು. ಎಷ್ಟೋ ಸಲ ಹಾಳುಬಿದ್ದ ಗುಡಿಯಲ್ಲೋ ಛತ್ರದಲ್ಲೋ ರಾತ್ರಿಯನ್ನು ಕಳೆಯುತ್ತಿದ್ದರು. ಇನ್ನು ಕೆಲವು ಸಲ ಕಾಡಿನ ನಡುವೆ, ಮರದ ಬುಡದಲ್ಲಿ ನಿದ್ರಿಸಿದ್ದೂ ಉಂಟು. ಕೆಲವೊಮ್ಮೆ ನೆಲವೇ ಹಾಸುಗೆ, ಗಗನವೇ ಹೊದಿಕೆ ! ಮಳೆ – ಬಿಸಿಲು – ಚಳಿಗೆ ಸಿಕ್ಕಿಕೊಳ್ಳುತಿದ್ದ ಸಂದರ್ಭಗಳಂತೂ ಹಲವಾರು, ಹೀಗೆ ಕಷ್ಟಗಳನ್ನು ಸಹಿಸಿಕೊಂಡು, ಆದರೆ ಆಂತರ್ಯದಲ್ಲಿ ಆನಂದವನ್ನು ತುಂಬಿಕೊಂಡು ಮುಂದೆ ಸಾಗುತ್ತಿದ್ದರು.

**ಕಾಶೀಕ್ಷೇತ್ರ ದರ್ಶನ :** ಸ್ವಾಮೀಜಿ ಮೊಟ್ಟಮೊದಲು ಕಾಶೀಕ್ಷೇತ್ರವನ್ನು ದರ್ಶನ ಮಾಡಿದರು. ಇದು ಪುರಾತನ ಕಾಲದಿಂದಲೂ, ಪರಮ ಪಾವನ ಕ್ಷೇತ್ರ ಎಂಬ ಪ್ರಸಿದ್ಧಿಯನ್ನು ಹೊಂದಿದೆ. ಇದು ಕಾಶೀ ವಿಶ್ವನಾಥನ ಮಹಾಪೀಠ; ಆಧ್ಯಾತ್ಮಿಕ ವಿದ್ಯೆಯ ಮಹಾಕೇಂದ್ರ. ಪಕ್ಕದಲ್ಲೇ ಪವಿತ್ರ ಗಂಗೆ ಹರಿಯುತ್ತಿದ್ದಾಳೆ. ಅಸಂಖ್ಯಾತ ಭಕ್ತರು ಅರ್ಘ್ಯ ಕೊಡುತ್ತ ಪ್ರಾರ್ಥನೆ ಸಲ್ಲಿಸುತ್ತಿರುತ್ತಾರೆ. ಜಗತ್ಪ್ರಸಿದ್ಧವಾದ ವಿಶ್ವನಾಥ, ಅನ್ನಪೂರ್ಣೆ, ದುರ್ಗೆಯರ ದೇವಸ್ಥಾನಗಳ ನಗರ ವಾರಾಣಸಿ.



ಭಗವಾನ್ ಗೌತಮ ಬುದ್ಧನೂ ಶ್ರೀ ಆದಿಶಂಕರರೂ ಧರ್ಮ ಬೋಧನೆಯನ್ನು ಮಾಡಿದ ಸ್ಥಳ ಇದು. ಈ ಎಲ್ಲ ಪವಿತ್ರದೃಶ್ಯಗಳು, ಭಾವನೆಗಳು ಸ್ವಾಮೀಜಿಯ ಮನಸ್ಸಿನ ಮೇಲೆ ತುಂಬ ಆಳವಾದ ಪರಿಣಾಮವನ್ನು ಉಂಟುಮಾಡಿದವು.

ಕಾಶಿಯಲ್ಲಿ ಸ್ವಾಮೀಜಿ ಇದ್ದಾಗ ಒಂದು ಸ್ವಾರಸ್ಯಕರವಾದ ಘಟನೆ ನಡೆಯಿತು. ಅದೇನೆಂದರೆ, ಸ್ವಾಮೀಜಿಯವರನ್ನು ಕೋತಿಗಳ ಹಿಂಡೊಂದು ವೇಗವಾಗಿ ಅಟ್ಟಿಸಿಕೊಂಡು ಬಂದವು. ಆ ಸಮಯಕ್ಕೆ ಸರಿಯಾಗಿ ವೃದ್ಧ ಸಾಧುವೊಬ್ಬರು ಕೂಗಿದ್ದು ಅವರ ಕಿವಿಗೆ ಬಿತ್ತು: Face the brute! "ಆ ಪ್ರಾಣಿಗಳನ್ನು ಎದುರಿಸು" ಈ ಮಾತು ಮಿಂಚಿನಂತೆ ಕೆಲಸ ಮಾಡಿತು. ಸ್ವಾಮೀಜಿ ಇದ್ದಕ್ಕಿದ್ದಂತೆ ಧೈರ್ಯವಾಗಿ ಎದುರಿಸಿ ನಿಂತರು. ತಕ್ಷಣ ಆ ಕೋತಿಗಳು ದಿಕ್ಕಾಪಾಲಾಗಿ ಓಡಿದವು. ಇದರಿಂದ ಸ್ವಾಮೀಜಿ ಒಂದು